ಅನುಬಂಧ - ಆ

ಸಮಾಜ ಕಲ್ಯಾಣ ಇಲಾಖೆಯಿಂದ ಬೀದರ್ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಲಯಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಣದ ವಿವರ ಈ ಕೆಳಕಂಡಂತಿದೆ.

1988–89 ರಿಂದ 1990–91

ಕ್ರಮ ಸಂಖ್ಯೆ	ತಾಲ್ಲೂಕು	1988–89 (ರೂ.)	1989–90 (ರೂ.)	1990–91 (ರೂ.)	ಒಟ್ಟು (ರೂ.)
1	2	3	4	5	6
1.	ಹುಮ್ನಾಬಾದ್	1,00,781	4,20,800	13,35,620	18,57,201
2.	ಔರಾದ್	4,28,600	4,80,000	5,72,000	14,80,600
3.	ಬಾಲ್ಕಿ	10,26,497	11,49,600	13,69,940	35,46,037
4.	ಬಸವಕಲ್ಯಾಣ	6,75,045	7,56,000	9,00,900	23,31,945
5.	ಬೀದರ್	11,78,650	13,20,000	15,73,000	40,71,650
		ಒಟ್ಟು			1,32,87,433

ಸರ್ಕಾರಿ ಸ್ವಾಮ್ಯದ ಮೈಸೂರು ಸಾಬೂನು ಕಾರ್ಖಾನೆಯು ಅನುಭವಿಸುತ್ತಿರುವ ನಷ್ಟ

1071. ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) :– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ರಾಜ್ಯ ಸರ್ಕಾರಿ ಸ್ವಾಮ್ಯದ ಮೈಸೂರು ಸಾಬೂನು ಮತ್ತು ಮಾರ್ಜಕಗಳ ಕಾರ್ಖಾನೆ ನಷ್ಟದಲ್ಲಿ ನಡೆಯುತ್ತಿರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ, 31ನೇ ಜನವರಿ 1992ರವರೆಗೆ ಈ ಕಾರ್ಖಾನೆಯು ಯಾವ ಪ್ರಮಾಣದಲ್ಲಿ ನಷ್ಟವನ್ನು ಅನುಭವಿಸಿದೆ;

ಇ) ಕಾರ್ಖಾನೆಗಳ ವಿಸ್ತರಣಾ ಯೋಜನೆಗಳ ಅನುಷ್ಠಾನದಲ್ಲಿ ಆಗಿರುವ ಅವ್ಯವಹಾರವೇ ಈ ನಷ್ಟಕ್ಕೆ ಕಾರಣವೆಂಬುದನ್ನು ಸರ್ಕಾರ ಗಮನಿಸಿದೆಯೇ;

ಈ) ಈ ನಷ್ಟಕ್ಕೆ ಕಾರಣರಾದ ಈಗಿನ ಹಾಗೂ ಹಿಂದಿನ ಉನ್ನತ ಅಧಿಕಾರಿಗಳ ಮೇಲೆ ಸರ್ಕಾರ ಅಗತ್ಯ ಕ್ರಮವನ್ನು ಜರುಗಿಸುತ್ತದೆಯೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) –

ಅ) ಹೌದು

ಆ) ಕಂಪನಿಯು ದಿನಾಕ 31.1.1992 ರವೆಗೆ ರೂ. 8140.33 ಲಕ್ಷಗಳು.

ಇ) ಈ ಕಾರ್ಖಾನೆಯು ವಿಸ್ತರಣಾ ಯೋಜನೆಗೆ ಸಂಬಂಧದಲ್ಲಿ ಆಗಿರುವ ನಷ್ಟದ ಬಗ್ಗೆ ಕಾರಣ ತಿಳಿಯಲು ಮಹೇಂದ್ರ ಎನ್ಕ್ವೈರಿ ಕಮೀಷನನ್ನು ಸರ್ಕಾರ ನೇಮಿಸಿದೆ. (ಸರ್ಕಾರದ ಆದೇಶ ಸಂಖ್ಯೆ ಸಿಐ 54 ಸಿಹೆಚ್ಐ 38 ರಲ್ಲಿ) ತನಿಖೆ ಪೂರ್ಣವಾದ ನಂತರ ನಷ್ಟಕ್ಕೆ ನಿಜವಾದ ಕಾರಣ ತಿಳಿದು ಬರುತ್ತದೆ 9–9–91

ಈ) ಹೌದು, ಜಸ್ಟಿಸ್ ಮಹೇಂದ್ರ ಕಮೀಷನ್ ವರದಿಯನ್ನು ಅನುಸರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.